ಸಬ್ಸಿಡಿ ರೂಪದಲ್ಲಿ ಭಾರತ ಸರ್ಕಾರವು ಭರಿಸುತ್ತಿದ್ದು ಉಳಿದ ಶೇ.50 ರಷ್ಟನ್ನು ರೈತರು ಭರಿಸಬೇಕಿದೆ. ಇಲ್ಲಿಯವರೆಗೆ 32,517/– ಹಸು ಮತ್ತು ಎಮ್ಮೆಗಳನ್ನು ವಿಮೆಗೆ ಒಳಪಡಿಸಲಾಗಿದೆ.

ಇ) ಕೇಂದ್ರ ಸರ್ಕಾರ ಹೆಚ್ಚಿನ ಸಬ್ಸಿಡಿ ನೀಡಿದಲ್ಲಿ ಪರಿಶೀಲಿಸಲಾಗುವುದು.

ಈ) ಹೌದು.

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಬಗ್ಗೆ

281 (683) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನೆ ಇಲಾಖೆಯಿಂದ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಂದು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಕೀಯ ವೈದ್ಯಾಧಿಕಾರಿಗಳ ಹೆಸರೇನು?

ಆ) ಅವರು ಈ ಹುದ್ದೆಗಳಲ್ಲಿ ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿದ್ದಾರೆ?

ಇ) ಬಹುತೇಕ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಪಶು ವೈದ್ಯಕೀಯ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುವಾಗ ವೈದ್ಯಾಧಿಕಾರಿಗಳಿಗೆ ಆಡಳಿತಾತ್ಮಕ ಹುದ್ದೆ ನೀಡುವುದು ಸಮಂಜಸವೇ?

ಈ) ಪಂಚಾಯತ್ ರಾಜ್ ಇಲಾಖೆಗೆ ಈ ವೈದ್ಯರ ಸೇವೆ ಅಷ್ಟೊಂದು ಅನಿವಾರ್ಯವೆ?

ಉ) ಈ ವೈದ್ಯಾಧಿಕಾರಿಗಳನ್ನು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ಕಳಿಸಿಕೊಟ್ಟು ಜಾನುವಾರುಗಳ ಪ್ರಾಣ ರಕ್ಷಣೆಯ ಪುಣ್ಯ ಕಾರ್ಯಕ್ಕೆ ತೊಡಗಿಸಲಾಗುವುದೇ?

ಊ) ಹಾಗಿದ್ದರೆ, ಈ ಅಧಿಕಾರಿಗಳನ್ನು ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಪಶುಸಂಗೋಪನೆ ಇಲಾಖೆಯಿಂದ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ನಿಯೋಜನೆ ಮೇಲೆ ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದು, ಅವರುಗಳ ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರುಗಳ ಸೇವೆಯನ್ನು ಮಾತೃ ಇಲಾಖೆಗೆ ವಾಪಸ್ಸು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇಲ್ಲ.

ಉ) ಹೌದು.

ಊ) ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 3703/2009 ರಲ್ಲಿ ನೀಡಿರುವ ಮಧ್ಯಂತರ ತಡೆಯಾಜ್ಞೆ ಆದೇಶದಂತೆ ಇಲಾಖೆಯ 17 ಸಹಾಯಕ ನಿರ್ದೇಶಕರುಗಳು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಮುಂದುವರೆಯುತ್ತಿದ್ದು, ಉಚ್ಚನ್ಯಾಯಾಲಯದಿಂದ ಅಂತಿಮ ತೀರ್ಮ ಬಂದ ನಂತರ ಅದರಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ತಾಲ್ಲೂಕು ಪಂಚಾಯತಿಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವವರ ಪಟ್ಟಿ

ಕ್ರಮ ಸಂ.	ಅಧಿಕಾರಿಗಳ ಹೆಸರು	ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿದ್ದಾರೆ
1	ಡಾ: ವಿ.ಕೆ.ದೇಶಪಂಡೆ	07–01–2005
2	ಡಾ: ರಾಧಾಕೃಷ್ಣ ರೆಡ್ಡಿ	24–07–2006
3	ಡಾ: ತಿಪ್ಪೇಸ್ವಾಮಿ ಎಂ.ಹೆಚ್	23–08–2007
4	ಡಾ: ಕೆ.ವಿ.ದೇವರಾಜುಲು	18–12–2004
5	ಡಾ: ವೇದಮೂರ್ತಿ	29–07–2006
6	ಡಾ: ಎಸ್. ರಂಗಸ್ವಾಮಿ	01–06–2006
7	ಡಾ: ಹೆಚ್ ಚಂದ್ರಶೇಖರಪ್ಪ	10–12–2004

8	ಡಾ:ಅಶ್ವಥಪ್ಪ. ಎಂ.	30–08–2006
9	ಡಾ: ರಾಮಚಂದ್ರರೆಡ್ಡಿ	24–07–2006
10	ಡಾ: ಕೆ.ವಿ.ನಾಗರಾಜು	15–03–2005
11	ಡಾ: ವೀರಭದ್ರಪ್ಪ	06–08–2005
12	ಡಾ: ಎಸ್ ಶಶಿಕುಮಾರ್	12–08–2005
13	ಡಾ: ಎಸ್. ಪ್ರೇಮಕುಮಾರ್	01–06–2006
14	ಡಾ: ಎಂ. ಕೃಷ್ಣಂರಾಜು	26–02–2007
15	ಡಾ: ಎಸ್.ವಿ.ರವಿಕುಮಾರ್	05–06–2007
16	ಡಾ: ಬಿ. ಕೃಷ್ಣಾರೆಡ್ಡಿ	15–10–2007
17	ಡಾ: ಬಿ.ಎಸ್. ಷಡಾಕ್ಷರಮೂರ್ತಿ	03–09–2007

ರಾಜ್ಯದಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾಹಿತಿ ಬಗ್ಗೆ

282 (684) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಬ್ಲಾಕ್ ಎಜುಕೇಷನ್ ಆಫೀಸರ್ ಹೆಸರೇನು ಮತ್ತು ಅವರು ಪ್ರಸಕ್ತ ಹುದ್ದೆಯಲ್ಲಿ ಎಂದಿನಿಂದ ಕಾರ್ಯ ನಿರ್ವಹಿಸಿದ್ದಾರೆ.

ಆ) 01–06–2008 ರಿಂದ 31–12–2009ರ ಅವಧಿಯಲ್ಲಿ ಎಷ್ಟು ಜನ ಕ್ಷೇತ್ರ ಶಿಕ್ಷಣಾಧಿಕಾರಿಗಳ (ಬಿಇಓ) ಅವಧಿ ಪೂರ್ವ (ಪ್ರಿಮೆಚ್ಯೂರ್) ವರ್ಗಾವಣೆ ಮಾಡಲಾಗಿದೆ; ಅವರ ಹೆಸರೇನು;

ಇ) ಅವರು ವರ್ಗಾವಣೆಗೆ ಮುನ್ನ ಆ ಹುದ್ದೆಯಲ್ಲಿ ಎಷ್ಟು ತಿಂಗಳು ಕಾರ್ಯ ನಿರ್ವಹಿಸುತ್ತಿದ್ದರು;

ಈ) ಅವರ ಅವಧಿ ಪೂರ್ವ ವರ್ಗಾವಣೆಗೆ ಕಾರಣಗಳೇನು;

ಉ) 01–06–2008 ರಿಂದ 31–12–2009ರ ಅವಧಿಯಲ್ಲಿ ಎಷ್ಟು ಜನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅವಧಿ ಮೀರಿ ಸೇವೆ ಸಲ್ಲಿಸುತ್ತಿದ್ದರು; ಅವರ ಹೆಸರೇನು;